# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 131 | Pages. 2 | Date: 25-03-2025, TUESDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 131 - ಪುಟಗಳು : 2 - 25 ಮಾರ್ಚ್ 2025 ಮಂಗಳವಾರ Ph: 8762954248 ದರ : ₹1


# ವರ್ಷಕ್ಕೆ 350 ಕ್ಷಯರೋಗಿಗಳ ಪತ್ತೆ

## ಜಿಲ್ಲಾದ್ಯಂತ 9 ಪರೀಕ್ಷಾ ಘಟಕ : ವಿಶ್ವ ಕ್ಷಯ ರೋಗ ದಿನಾಚರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಕೇಂದ್ರ ಸರ್ಕಾರವು 2025ರ ವೇಳೆಗೆ ಕ್ಷಯ ಮುಕ್ತ ಭಾರತ ನಿರ್ಮಾಣದ ಗುರಿಯನ್ನು ಹೊಂದಿದೆ. ಈ ನಿಟ್ಟಿನಲ್ಲಿ ಜಿಲ್ಲಾ ಕ್ಷಯ ರೋಗ ನಿರ್ಮೂಲನ ಕೇಂದ್ರವು ಕ್ಷಯ ರೋಗಿಗಳ ಪತ್ತೆ ಮಾಡಿ ಪರೀಕ್ಷೆ ಮಾಡುವುದರಲ್ಲಿ ಮುಂದಿದೆ ಎಂದು ಜಿಲ್ಲಾ ಅಂಧತ್ವ ನಿವಾರಣಾ ಮತ್ತು ಕುಷ್ಠರೋಗ ನಿಯಂತ್ರಣಾಧಿಕಾರಿ ಡಾ. ಪಿ. ನಾಗೇಶ್ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿಗಳ ಕಚೇರಿ ವತಿಯಿಂದ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಸೋಮವಾರ ಏರ್ಪಡಿಸಿದ್ದ ವಿಶ್ವ ಕ್ಷಯರೋಗ ದಿನಾಚರಣೆಯಲ್ಲಿ ಮಾತನಾಡಿ, ಜಿಲ್ಲೆಯಲ್ಲಿ 9 ಚಿಕಿತ್ಸಾ ಘಟಕ ಕಾರ್ಯನಿರ್ವಹಿಸುತ್ತಿವೆ. 2024ರಲ್ಲಿ 91 ನಿಗದಿತ ಮೈಕ್ರೋಸ್ಕೋಪಿಕ್ ಕಫ ಪರೀಕ್ಷಾ ಕೇಂದ್ರಗಳು ಮತ್ತು ಕಫ ಪರೀಕ್ಷೆಗೆ ಬಳಸುವ 14 ಅತ್ಯಾಧುನಿಕ Molecular Testing ಪ್ರಯೋಗ ಶಾಲೆಗಳು, ಅತ್ಯಾಧುನಿಕ ಯಂತ್ರಗಳಾದ CB-NAAT&02,Truenaat12 ಯಂತ್ರಗಳು ಜಿಲ್ಲೆಯಲ್ಲಿವೆ ಎಂದರು.

ಕೇಂದ್ರ ಸರ್ಕಾರದಿಂದ ರೂಪಿಸಲ್ಪಟ್ಟಿರುವ Ni - kshay ತಂತ್ರಾಂಶದಿಂದ ಕ್ಷಯ ರೋಗ ಪತ್ತೆಗೆ ಒಳಪಡುವ ರೋಗಿಗಳಿಗೆ ಸಂಬಂಧಪಟ್ಟ ಇನ್ನಿತರೆ ವಿವರಗಳನ್ನು ದಾಖಲಿಸಲಾಗುತ್ತಿದೆ. 2024ನೇ ಸಾಲಿನಲ್ಲಿ ಶೇ.96 ರಷ್ಟು ಕ್ಷಯರೋಗಿಗಳ ವಿವರವನ್ನು ಸೇವಾ ಸಿಂಧು ಪೋರ್ಟನಲ್ಲಿ ನಮೂದಿಸಲಾಗಿದೆ, ಜಿಲ್ಲೆಗೆ ಖಾಸಗಿ ವಲಯದಲ್ಲಿ ವಾರ್ಷಿಕ 350 ಕ್ಷಯ ರೋಗಿಗಳ ಪತ್ತೆ ಮಾಡುವ ಗುರಿಯನ್ನು ನೀಡಲಾಗಿದ್ದು ಶೇ. ನೂರರಷ್ಟು ಯಶಸ್ಸು ಸಾಧಿಸಲಾಗಿದೆ ಎಂದು ತಿಳಿಸಿದರು.

ಹಾಸನ ನೌಕರರ ಸಂಘದ ಗೌರವಾಧ್ಯಕ್ಷ ಈ. ಕೃಷ್ಣೇಗೌಡ ಮಾತನಾಡಿ, ದೇಶದಲ್ಲಿ ಸುಸ್ಥಿರ ಸಮಾಜ ನಿರ್ಮಿಸುವ ನಿಟ್ಟಿನಲ್ಲಿ ಶಾಲಾ ಹಂತದಲ್ಲಿಯೇ ಶಿಕ್ಷಣದ ಜೊತೆಗೆ ಆರೋಗ್ಯದ ಕುರಿತಾದ ಜಾಗೃತಿ, ಸಂಸ್ಕಾರದ ಮೌಲ್ಯಗಳನ್ನು ಕಲಿಸಿಕೊಡುವ ಮೂಲಕ ಆರೋಗ್ಯವಂತ ರಾಷ್ಟ್ರವನ್ನು ನಿರ್ಮಾಣ ಮಾಡುವಲ್ಲಿ ಆರೋಗ್ಯ ಇಲಾಖೆಯು ಮುಖ್ಯ ಪಾತ್ರ ವಹಿಸುತ್ತದೆ ಎಂದರು. ಪ್ರಸ್ತುತ ದಿನಮಾನದಲ್ಲಿ ಯುವಕರು ಸೇರಿದಂತೆ ಎಲ್ಲಾ ಜನರು ತಂತ್ರಜ್ಞಾನದ ಮೊರೆ ಹೋಗಿ ಮೊಬೈಲ್‌ಗಳನ್ನು ಹೆಚ್ಚಾಗಿ ಬಳಸುತ್ತಾ ಆರೋಗ್ಯ ಹಾಳು ಮಾಡಿಕೊಳ್ಳುತ್ತಿದ್ದಾರೆ. ಬೆಳೆಯುವಂತಹ ಆಹಾರ ಪದಾರ್ಥಗಳ ಮೊದಲುಗೊಂಡು ಎಲ್ಲವೂ ಕೂಡ ಇಂದು ವಿಷಯುಕ್ತವಾಗುತ್ತಿದೆ. ಈ ವ್ಯವಸ್ಥೆಯನ್ನು ಹೋಗಲಾಡಿಸಲು, ಹೆಚ್ಚು ಬಲಿಷ್ಠವಾಗಲು ನಮ್ಮ ಆರೋಗ್ಯ ಇಲಾಖೆಯು ಹೆಚ್ಚು ಸಂಶೋಧನೆಗಳನ್ನು ಮಾಡಬೇಕು ಎಂದರು. 2023ರಲ್ಲಿ ಕ್ಷಯಮುಕ್ತ ಆಲೂರು ತಾಲ್ಲೂಕಿನ ಕುಂದೂರು ಗ್ರಾಮ ಪಂಚಾಯಿತಿ, ಚನ್ನರಾಯಪಟ್ಟಣ ತಾಲ್ಲೂಕಿನ ತಗಡೂರು, ಹಾಸನದ ಕಾರ್ಲೆ ಗ್ರಾಪಂಗಳಿಗೆ ಬೆಳ್ಳಿ ಪದಕ ಮತ್ತು ಪ್ರಮಾಣ ಪತ್ರ ವಿತರಣೆ ಮಾಡಲಾಯಿತು. ಅರಸೀಕೆರೆ ತಾಲ್ಲೂಕಿನ ಡಿ.ಎಂ.ಕುರ್ಕೆ ಗ್ರಾಮ ಪಂಚಾಯಿತಿ, ಬೇಲೂರು ತಾಲ್ಲೂಕಿನ ಕೆಸಗೋಡು ಗ್ರಾಮ ಪಂಚಾಯಿತಿ, ಹಾಸನ ತಾಲ್ಲೂಕಿನ ಜಾಗರವಳ್ಳಿ ಗ್ರಾಮ ಪಂಚಾಯಿತಿಗಳಿಗೆ ಕಂಚಿನ ಪದಕ ಮತ್ತು ಪ್ರಮಾಣ ಪತ್ರ ವಿತರಣೆ ಮಾಡಲಾಯಿತು. 2024ರಲ್ಲಿ 26 ಗ್ರಾಮ ಪಂಚಾಯಿತಿಗಳಿಗೆ ಕಂಚಿನ ಪದಕ ಹಾಗೂ ಪ್ರಮಾಣ ಪತ್ರ ವಿತರಣೆ ಮಾಡಲಾಯಿತು. ಮತ್ತು ವೈದ್ಯಾಧಿಕಾರಿಗಳು ಮತ್ತು ಎನ್.ಟಿ.ಇ.ಪಿ, ಡಿ.ಟಿ.ಸಿ ಸಿಬ್ಬಂದಿ ವರ್ಗದವರಿಗೆ ಅಭಿನಂದನಾ ಸ್ಮರಣಿಕೆ ವಿತರಣೆ ಮಾಡಲಾಯಿತು. ಜಿಲ್ಲೆಯಲ್ಲಿ ಕ್ಷಯರೋಗಿಗಳ ಪತ್ತೆ ಮಾಡಲು ಸಹಕರಿಸಿದ ನಾಲ್ಕು ಮೆಡಿಕಲ್ ಶಾಪ್‌ಗಳ ಮಾಲೀಕರನ್ನು ಸನ್ಮಾನಿಸಲಾಯಿತು.

### ಆರೋಗ್ಯ ತಪಾಸಣೆ ಅವಶ್ಯ




ವೇದಿಕೆ ಕಾರ್ಯಕ್ರಮಕ್ಕು ಮೊದಲು ಜಿಲ್ಲಾಧಿಕಾರಿ ಕಚೇರಿ ಆವರಣದಿಂದ ಹಮ್ಮಿಕೊಂಡಿದ್ದ ಜಾಗೃತಿ ಜಾಥಾಗೆ ಚಾಲನೆ ನೀಡಿದ ಜಿಲ್ಲಾಧಿಕಾರಿ ಸಿ. ಸತ್ಯಭಾಮ ಮಾತನಾಡಿ, ಯಾವಾಗಲೂ ಕೆಮ್ಮುವುದು, ತೂಕ ಇಳಿಯುವುದು, ಆಯಾಸ ಆಗುವುದು ಕ್ಷಯರೋಗದ ಮುನ್ಸೂಚನೆ. ಅಂತಹ ಸಂದರ್ಭಗಳಲ್ಲಿ ಹತ್ತಿರದ ಪ್ರಾಥಮಿಕ ಆಸ್ಪತ್ರೆಯಲ್ಲಿ ಪರೀಕ್ಷೆ ಮಾಡಿಸಿಕೊಳ್ಳುವ ಮೂಲಕ ಕ್ಷಯ ಮುಕ್ತ ಭಾರತವನ್ನಾಗಿ ಮಾಡಲು ಎಲ್ಲರೂ ಕೈಜೋಡಿಸಿ ಎಂದು ಜಿಲ್ಲಾಧಿಕಾರಿ ಕರೆ ನೀಡಿದರು.

ಪೋಲಿಯೋ ಮುಕ್ತ ಭಾರತವನ್ನಾಗಿ ಮಾಡಿದ್ದೇವೆಯೋ ಅದೇ ರೀತಿ ಕ್ಷಯರೋಗ ಮುಕ್ತ ಭಾರತವನ್ನಾಗಿಸಲು ನಾವೆಲ್ಲರೂ ಕೈಜೋಡಿಸಬೇಕಿದೆ ಎಂದರು.

ಜಾಥಾದಲ್ಲಿ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಹೆಚ್. ಅನಿಲ್ ಕುಮಾರ್, ಜಿಲ್ಲಾ ಅಂಧತ್ವ ಮತ್ತು ಕುಷ್ಠರೋಗ ನಿಯಂತ್ರಣಾಧಿಕಾರಿ ಡಾ. ನಾಗೇಶ್ ಆರಾಧ್ಯ, ಜಿಲ್ಲಾ ಆರ್.ಸಿ.ಹೆಚ್. ಶಿವಶಂಕರಪ್ಪ, ಶ್ವಾಸಕೋಶ, ವೈದ್ಯಾಶಾಸ್ತ್ರ ವಿಭಾಗದ ಮುಖ್ಯಸ್ಥರು ಪಿ.ಕೆ. ಚನ್ನವೀರಪ್ಪ, ಜಿಲ್ಲಾ ಸರಕಾರಿ ನೌಕರರ ಸಂಘದ ಗೌರವಾಧ್ಯಕ್ಷ ಈ. ಕೃಷ್ಣೇಗೌಡ, ರವಿಕುಮಾರ್, ರಾಘವೇಂದ್ರಚಾರ್ ಇತರರಿದ್ದರು.

# 6 ಕೋಟಿ ರೂ. ವೆಚ್ಚದಲ್ಲಿ ಚಿಕ್ಕಮ್ಮ ದೇವಿ ದೇಗುಲ ನಿರ್ಮಾಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಚನ್ನರಾಯಪಟ್ಟಣ: ಭಕ್ತರು ಹಾಗೂ ದಾನಿಗಳ ಸಹಕಾರದಿಂದ 6 ಕೋಟಿ ರೂ. ವೆಚ್ಚದಲ್ಲಿ ಶ್ರೀ ಸಂತೆಕಾಳೇಶ್ವರಿ ಮತ್ತು ಚಿಕ್ಕಮ್ಮ ದೇವಿ ದೇಗುಲ ಲೋಕಾರ್ಪಣೆ ಮಾಡಲಾಗಿದೆ ಎಂದು ಶಾಸಕ ಎಚ್.ಡಿ. ರೇವಣ್ಣ ಹೇಳಿದರು.

ತಾಲ್ಲೂಕಿನ ಬಾಗೂರು ಗ್ರಾಮದೇವತೆ ಶ್ರೀ ಸಂತೆಕಾಳೇಶ್ವರಿ ಹಾಗೂ ಚಿಕ್ಕಮ್ಮ ದೇವಿ ದೇವರ ಪುನರ್ ಪ್ರತಿಷ್ಠಾಪನೆ ಹಾಗೂ ದೇವಾಲಯ ಲೋಕಾರ್ಪಣೆ ಹಿನ್ನೆಲೆ ನಡೆದ ಧಾರ್ಮಿಕ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರ ಪರಿಶ್ರಮದಿಂದ ಹೇಮಾವತಿ ನೀರಾವರಿ ಇಲಾಖೆಯಿಂದ ದೇವಾಲಯ ನಿರ್ಮಾಣಕ್ಕೆ ಸುಮಾರು 65 ಲಕ್ಷ ರೂ. ಹಣ ಬಿಡುಗಡೆ ಮಾಡಿಸಿದ್ದರು. ಜೊತೆಗೆ ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ಸುಮಾರು 5 ಲಕ್ಷ ರೂ. ಅನುದಾನ ನೀಡಿದ್ದಾರೆ ಎಂದರು.

ಕ್ಷೇತ್ರದ ಶಾಸಕರು ವಿವಿಧ ಅನುದಾನ ಬಳಸಿ 30 ಲಕ್ಷ ರೂ. ನೀಡಿದ್ದಾರೆ. ಮುಂಬರುವ ದಿನಗಳಲ್ಲಿ ದೇವಾಲಯದ ಅಭಿವೃದ್ಧಿಗೆ ವಿಧಾನ ಪರಿಷತ್ ಸದಸ್ಯರ ಅನುದಾನದಲ್ಲಿ 5 ಲಕ್ಷ ರೂ. ಅನುದಾನ ಕಲ್ಪಿಸಲಾಗುವುದು ಎಂದು ಭರವಸೆ ನೀಡಿದರು.

ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಮಾತನಾಡಿ, ಕಳೆದ 7 ವರ್ಷಗಳಿಂದ ದೇವಾಲಯವನ್ನು ನಿರ್ಮಾಣ ಮಾಡಲಾಗಿದೆ. ಬಾಗೂರು ಹೋಬಳಿ ಕೇಂದ್ರ ಧಾರ್ಮಿಕವಾಗಿ ಹೆಚ್ಚು ಇತಿಹಾಸವುಳ್ಳ ಗ್ರಾಮವಾಗಿದೆ ಎಂದರು.

ಈ ದೇವಾಲಯಕ್ಕೆ ಒಳಪಡುವ 16 ಗ್ರಾಮಗಳ ಗ್ರಾಮಸ್ಥರು ಹೆಚ್ಚಿನ ಧನ ಸಹಾಯ ಮಾಡುವ ಮೂಲಕ ದೇವಾಲಯ ನಿರ್ಮಾಣಕ್ಕೆ ಹೆಚ್ಚು ಸಹಕಾರ ನೀಡಿದ್ದಾರೆ ಮುಂಬರುವ ದಿನಗಳಲ್ಲೂ ಅವರ ಸಹಕಾರ ಹೀಗೆ ಮುಂದುವರೆಯಲಿ ಎಂದು ಆಶಿಸಿದರು.

ಶಾಸಕ ಸಿ.ಎನ್. ಬಾಲಕೃಷ್ಣ ಮಾತನಾಡಿ, ಬಾಗೂರು ಹೋಬಳಿ ಕೇಂದ್ರ ತಮ್ಮ 3 ಚುನಾವಣೆಗಳಲ್ಲೂ ಹೆಚ್ಚು ರಾಜಕೀಯವಾಗಿ ಶಕ್ತಿ ತುಂಬಿದೆ. ತಾವು ದೇವಾಲಯ ನಿರ್ಮಾಣಕ್ಕೆ ಮುಜರಾಯಿ ಸೇರಿದಂತೆ ವಿವಿಧ ಅನುದಾನಗಳ ಮೂಲಕ ಸುಮಾರು 30 ಲಕ್ಷ ರೂ. ಹಾಗೂ ಹೇಮಾವತಿ ನೀರಾವರಿ ಇಲಾಖೆಯಿಂದ 65 ಲಕ್ಷ ರೂ. ಅನುದಾನ ಬಿಡುಗಡೆ ಮಾಡಿಸಿದ್ದೇನೆ ಎಂದರು.

ಇನ್ನು ನೀರಾವರಿ ಇಲಾಖೆಯಿಂದ ಹೆಚ್ಚಿನ ಹಣ ಬಿಡುಗಡೆ ಆಗಬೇಕಾಗಿದ್ದು ಮುಂಬರುವ ದಿನಗಳಲ್ಲಿ ಹಣ ಬಿಡುಗಡೆ ಆಗಲಿದೆ ತೆರು ನಿರ್ಮಾಣಕ್ಕೂ ತಾವು ಹೆಚ್ಚಿನ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ವಿಶ್ವ ಒಕ್ಕಲಿಗರ ಮಠದ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ, ವಿಧಾನ ಪರಿಷತ್ ಸದಸ್ಯ ಡಾ. ಸೂರಜ್ ರೇವಣ್ಣ ಮಾತನಾಡಿದರು. ದೇವಾಲಯ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಬಾಗೂರು ಮಂಜೇಗೌಡ, ಉಪಾಧ್ಯಕ್ಷ ಬಿ.ಎಚ್. ಶಿವಣ್ಣ, ಕಾರ್ಯದರ್ಶಿ ದಕ್ಷಿಣ ಮೂರ್ತಿ, ಹಾಸನ ಜಿಲ್ಲಾ ಹಾಲು ಒಕ್ಕೂಟದ ನಿರ್ದೇಶಕಿ ಕೆ.ವಿ. ವಸಂತ ಶಿವಣ್ಣ, ಹಾಸನ ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಕೃಷ್ಣೇಗೌಡ, ತಹಶೀಲ್ದಾರ್ ನವೀನ್ ಕುಮಾರ್, ಡಿವೈಎಸ್ಪಿ ಕುಮಾರ್, ಗ್ರಾಮ ಪಂಚಾಯಿತಿ ಅಧ್ಯಕ್ಷ ಕೆಂಪೇಗೌಡ, ದೇವಾಲಯ ಶಿಲ್ಪಿ ದತ್ತಾತ್ರೇಯ, ಗುಡಿಗೌಡ ಬಿ.ಕೆ. ತಿಮ್ಮೇಗೌಡ್ರು ಸೇರಿದಂತೆ ಇತರರು ಹಾಜರಿದ್ದರು.

# ಸಕಲೇಶಪುರದಲ್ಲಿ ಆಲಿಕಲ್ಲು ಸಹಿತ ಮಳೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಕಳೆದ ಮೂರು ದಿನಗಳಿಂದ ಜಿಲ್ಲೆಯ ವಿವಿಧೆಡೆ ಮಳೆ ಸುರಿಯುತ್ತಿದ್ದು ಸೋಮವಾರ ಆಲೂರು, ಬೇಲೂರು, ಸಕಲೇಶಪುರ ತಾಲ್ಲೂಕಿನಲ್ಲಿ ಬಿರುಗಾಳಿ ಸಹಿತ ಜೋರು ಮಳೆ ಸುರಿಯಿತು.

ಸಕಲೇಶಪುರ ತಾಲ್ಲೂಕಿನ ಹಲವೆಡೆ ಗುಡುಗು, ಮಿಂಚು, ಬಿರುಗಾಳಿ ಸಹಿತ ಮಳೆಯಿಂದಾಗಿ ಜನರು ಹೊರಗೆ ಬರಲು ಭಯಪಡುವಂತಾಗಿತ್ತು. ಶುಕ್ರವಾರ ಸಂತೆ, ಹೆತ್ತೂರು, ಹಾನುಬಾಳು, ಬೆಳಗೋಡು ಭಾಗದಲ್ಲಿ ಜೋರು ಗಾಳಿಗೆ ಹಲವು ಮರಗಳು, ಮರದ ಕೊಂಬೆಗಳು ಮುರಿದು ಬಿದ್ದಿವೆ. ಮುನ್ನೆಚ್ಚರಿಕೆ ಕ್ರಮವಾಗಿ ಹಲವೆಡೆ ವಿದ್ಯುತ್ ಪೂರೈಕೆಯನ್ನು ಸ್ಥಗಿತಗೊಳಿಸಲಾಗಿತ್ತು. ಕೆಲವು ಕಡೆಗಳಲ್ಲಿ ಆಲಿಕಲ್ಲು ಸಹಿತ ಮಳೆ ಸುರಿದ್ದರಿಂದ ತರಕಾರಿ, ಹಸಿ ಮೆಣಸಿನಕಾಯಿ, ಬಾಳೆ ಕೃಷಿಗೆ ಅನಾನುಕೂಲವಾಗಿದೆ.

ಹೊಳೆನರಸೀಪುರ ತಾಲ್ಲೂಕಿನ ಅತ್ತಿಚೌಡೇನಹಳ್ಳಿ ಗ್ರಾಮದಲ್ಲಿ ಗ್ರಾಮದ ಲಿಂಗರಾಜು ಎಂಬುವವರಿಗೆ ಸೇರಿದ ಬಾಳೆ ತೋಟ ಬಹುತೇಕ ಹಾಳಾಗಿದೆ. ಹಾಗೆಯೇ ಗೊನೆ ಸಮೇತ ಸಾವಿರಾರು ಬಾಳೆ ಮರ ನೆಲಕ್ಕುರುಳಿವೆ. ಬಾಳೆ ಹಣ್ಣಿಗೆ ಮಾರುಕಟ್ಟೆಯಲ್ಲಿ ಉತ್ತಮವಾದ ಬೆಲೆ ಇರುವುದರಿಂದ ಲಿಂಗರಾಜು ಉತ್ತಮ ಆದಾಯದ ನಿರೀಕ್ಷೆಯಲ್ಲಿದ್ದರು. ಆದರೆ ವರ್ಷದ ಮೊದಲ ಮಳೆ ಆರ್ಭಟಿಸಿದ್ದರಿಂದ ರೈತನಿಗೆ ಅಂದಾಜು 7 ಲಕ್ಷ ರೂ ನಷ್ಟವಾಗಿದೆ. ಫಸಲಿಗೆ ಬಂದಿದ್ದ ಬೆಳೆ ಕಳೆದುಕೊಂಡು ರೈತರು ಕಂಗಾಲಾಗಿದ್ದಾರೆ. ಬೆಳೆ ನಷ್ಟಕ್ಕೆ ಸೂಕ್ತ ಪರಿಹಾರ ನೀಡುವಂತೆ ಒತ್ತಾಯಿಸಿದ್ದಾರೆ.

# ಕೃಷಿ ಕಾಲೇಜು ಬೆಂಗಳೂರು ವಿವಿಯಲ್ಲೇ ಇರಲಿ: ರೇವಣ್ಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಹಾಸನ ಕೃಷಿ ಕಾಲೇಜನ್ನು ಮಂಡ್ಯ ವಿಶ್ವವಿದ್ಯಾಲಯದೊಂದಿಗೆ ವಿಲೀನ ಮಾಡಲು ಯಾವ ಕಾರಣಕ್ಕೂ ಬಿಡುವುದಿಲ್ಲ ಎಂದು ಮಾಜಿ ಸಚಿವ ಹೆಚ್.ಡಿ. ರೇವಣ್ಣ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ಹಾಸನ ಕೃಷಿ ಮಹಾವಿದ್ಯಾಲಯವನ್ನು ಮಂಡ್ಯ ನೂತನ ಕೃಷಿ ವಿಶ್ವವಿದ್ಯಾಲಯಕ್ಕೆ ವಿಲೀನ ಮಾಡುವುದಿಲ್ಲ ಎಂದು ಹೇಳಿದ್ದ ಕೃಷಿ ಸಚಿವ ಎನ್. ಚೆಲುವರಾಯಸ್ವಾಮಿ ಸದನದಲ್ಲಿ ಮಸೂದೆ ಪಾಸ್ ಮಾಡಿ ಮೋಸ ಮಾಡಿದ್ದಾರೆ. 400ಕ್ಕೂ ಹೆಚ್ಚು ವಿದ್ಯಾರ್ಥಿಗಳಿರುವ ಹಾಸನ ಕೃಷಿ ಮಹಾವಿದ್ಯಾಲಯ ಯಾವ ಸಮಸ್ಯೆಯಿಲ್ಲದೆ ಮುಂದುವರೆಯುತ್ತಿದೆ. ಈಗ ಮಂಡ್ಯದಲ್ಲಿ ವಿಶ್ವ ವಿದ್ಯಾಲಯ ಸ್ಥಾಪಿಸಲು ಬೆಂಗಳೂರು ವಿವಿ ಅಧೀನದಲ್ಲಿರುವ ನಮ್ಮ ಕಾಲೇಜನ್ನು ವಿಲೀನ ಮಾಡಿಕೊಳ್ಳುತ್ತಿರುವುದು ಸರಿಯಲ್ಲ.

ಈ ಬಗ್ಗೆ ಸದನದಲ್ಲಿ ಜೆಡಿಎಸ್ ಹಾಗೂ ಬಿಜೆಪಿ ಶಾಸಕರು ವಿರೋಧಿಸಿದ್ದೇವೆ. ಕೃಷಿ ಸಚಿವರು ನಮ್ಮ ಮನವಿ ಪುರಸ್ಕರಿಸಿದ್ದರು. ಆದರೆ ಮಾ. 19ರ ರಾತ್ರಿ 8 ಗಂಟೆಗೆ ಬಿಲ್ ಪಾಸ್ ಮಾಡಿ ರಾಜ್ಯಪಾಲರ ಅಂಕಿತಕ್ಕೆ ಕಳುಹಿಸಿಕೊಟ್ಟಿದ್ದಾರೆ. ರಾಜ್ಯಪಾಲರು ಯಾವ ಕಾರಣಕ್ಕೂ ಮಸೂದೆಗೆ ಸಹಿ ಹಾಕಬಾರದು ಎಂದು ಮನವಿ ಮಾಡಿದರು.


ರಾಜ್ಯ ಸರ್ಕಾರದ ನಿರ್ಧಾರ ಖಂಡಿಸಿ ಜಿಲ್ಲೆಯ ರೈತರೊಂದಿಗೆ ಪ್ರತಿಭಟನೆ ನಡೆಸಲಾಗುವುದು. ವಿದ್ಯಾರ್ಥಿಗಳಿಗೂ ಸಮಸ್ಯೆ ಕುರಿತು ಹೇಳಲಾಗುವುದು. ಸರ್ಕಾರ ಹಠಮಾರಿತನವನ್ನು ಇನ್ನಾದರು ಬಿಡಬೇಕು ಎಂದು ಆಗ್ರಹಿಸಿದರು.

**ಸಮಯ ಬಂದಾಗ ಉತ್ತರಿಸುವೆ:** ಹನಿಟ್ರ್ಯಾಪ್ ವಿಚಾರ ಕುರಿತು ಸಚಿವ ಸತೀಶ್ ಜಾರಕಿಹೊಳಿ ಅವರೇ ಹೇಳಿದ್ದಾರೆ ನಾನು ಏನೂ ಹೇಳುವುದಿಲ್ಲ ಎಂದು ಮಾಜಿ ಸಚಿವ ಹೆಚ್.ಡಿ. ರೇವಣ್ಣ ಪ್ರತಿಕ್ರಿಯಿಸಿದರು.

ಕಾಲ ಬಂದಾಗ ಉತ್ತರಿಸುತ್ತೇನೆ. ಬಿಜೆಪಿಯ 18 ಶಾಸಕರನ್ನು ಅಮಾನತು ಮಾಡಿರುವುದು ಸರಿಯಲ್ಲ. ಕೂಡಲೇ ಅಮಾನತು ಆದೇಶ ರದ್ದು ಮಾಡಬೇಕು. ಈ ರೀತಿ ಸಣ್ಣ ಪುಟ್ಟ ಘಟನೆ ನಡೆದಾಗ ಒಂದೆರಡು ದಿನ ಅಮಾನತು ಮಾಡುವುದು ಸರಿ. ಆರು ತಿಂಗಳ ವರೆಗೆ ಸಸ್ಪೆಂಡ್ ಮಾಡುವುದು ಯಾವ ಅರ್ಥ ಎಂದು ಬೇಸರ ವ್ಯಕ್ತಪಡಿಸಿದರು.

ಹಾಸನ ಹಾಲು ಒಕ್ಕೂಟದಲ್ಲಿ ನಿತ್ಯ 14 ಲಕ್ಷ ಲೀಟರ್ ಹಾಲು ಸಂಗ್ರಹವಾಗುತ್ತಿದೆ. 2.5 ಲಕ್ಷ ಲೀಟರ್ ಮಾತ್ರ ನಿತ್ಯ ಮಾರಾಟವಾಗುತ್ತಿದ್ದು ಉಳಿದ ಹಾಲನ್ನು ವಿವಿಧ ಪದಾರ್ಥಗಳಿಗೆ ಪರಿವರ್ತನೆ ಮಾಡಲಾಗುತ್ತಿದೆ. ಬೆಂಗಳೂರು, ಮತ್ತಿತರ ಕಡೆಗಳಲ್ಲಿ ಹಾಲು ಮಾರಾಟಕ್ಕೆ ಅವಕಾಶ ಕಲ್ಪಿಸಬೇಕೆಂದು ಮುಖ್ಯಮಂತ್ರಿಗೆ ಮನವಿ ಮಾಡಲಾಗಿದೆ ಎಂದರು.

# ನಿವೇಶನ ಕೊಡದಿದ್ದರೆ ಪಿಡಿಓಗಳೇ ಹೊಣೆ


ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಸೀಕೆರೆ: ವಿವಿಧ ವಸತಿ ಯೋಜನೆಯಡಿ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿರುವ ಸಾರ್ವಜನಿಕರಿಗೆ ಶೀಘ್ರ ಜಾಗ ಗುರುತಿಸಿ ಮಂಜೂರಾತಿ ಮಾಡಬೇಕು. ಇಲ್ಲವಾದರೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ಎಚ್ಚರಿಕೆ ನೀಡಿದರು.

ತಾಲ್ಲೂಕು ಆಡಳಿತದಿಂದ ಕಣಕಟ್ಟೆ ಗ್ರಾಮ ಪಂಚಾಯಿತಿ ಆವರಣದಲ್ಲಿ ಸೋಮವಾರ ಏರ್ಪಡಿಸಿದ್ದ ಹೋಬಳಿ ಮಟ್ಟದ ಜನಸಂಪರ್ಕ ಸಭೆಯಲ್ಲಿ, ಸ್ವಂತ ಮನೆ ಇಲ್ಲದೆ ಬದುಕುವುದು ಕಷ್ಟವಾಗಿದೆ. ಸೂರು ನಿರ್ಮಿಸಿಕೊಳ್ಳಲು ನಿವೇಶನ ಕೋರಿ ಗ್ರಾಮ ಪಂಚಾಯಿತಿಗೆ ಅರ್ಜಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ ಎಂದು ಬಹುತೇಕರು ಅಳಲು ತೋಡಿಕೊಂಡರು. ಆಗ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ವಿರುದ್ಧ ಆಕ್ರೋಶಗೊಂಡ ಶಾಸಕರು, ಒಂದು ತಿಂಗಳ ಒಳಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸರ್ಕಾರಿ ಜಾಗಗಳನ್ನು ಗುರುತಿಸಿ ನಿವೇಶನ ರಹಿತರಿಗೆ ವಿತರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಗ್ರಾಮೀಣ ಭಾಗದ ಜನರಿಗೆ ಕುಡಿಯುವ ನೀರು, ರಸ್ತೆ, ಚರಂಡಿ ಹಾಗು ವಿದ್ಯುತ್ ವ್ಯವಸ್ಥೆ ಕಲ್ಪಿಸಬೇಕು ಎಂದು ಸ್ವಾತಂತ್ರ್ಯ ಬಂದು ಇಷ್ಟು ವರ್ಷವಾದರೂ ಜನರಿಗೆ ಮೂಲಸೌಲಭ್ಯ ಇಲ್ಲದೆ ಇರುವುದು ಶೋಚನೀಯ ಎಂದರು.

ತಹಶೀಲ್ದಾರ್ ಸಂತೋಷ್ ಕುಮಾರ್ ಮಾತನಾಡಿ, ಶಾಸಕಾಂಗ ಹಾಗು ಕಾರ್ಯಾಂಗ ಜನರ ಬಳಿಗೆ ಬಂದು ಅವರ ಸಮಸ್ಯೆಗಳನ್ನು ಆಲಿಸಿ ಆದ್ಯತೆ ಮೇರೆಗೆ ಸಾರ್ವಜನಿಕರ ಕೆಲಸ ಮಾಡಬೇಕು. ಆ ಉದ್ದೇಶದಿಂದ ಜನ ಸಂಪರ್ಕ ಸಭೆ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಕಣಕಟ್ಟೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮೀನಾಕ್ಷಮ್ಮ, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷೆ ಮಂಜುಳಾಬಾಯಿ ಚಂದ್ರ ನಾಯ್ಕ, ಗೊಲ್ಲರಹಳ್ಳಿ ಹನುಮಪ್ಪ ಇತರರಿದ್ದರು.

# ನೆಮ್ಮದಿಗೆ ಭಂಗ ತಂದ ಮಹಿಳೆ ವಿರುದ್ಧ ಕ್ರಮ ಜರುಗಿಸಿ

ಹಾಸನ: ಆಲೂರಿನ ಆಶಾ ಬಡಾವಣೆಯ ಬಾಡಿಗೆ ಮನೆಯಲ್ಲಿ ವಾಸವಿರುವ ಚಂದ್ರಕಲಾ ಎಂಬ ಮಹಿಳೆ ಸುತ್ತಲಿನವರಿಗೆ ವಿಪರೀತ ಕಿರುಕುಳ ನೀಡುತ್ತಿದ್ದು ಪೊಲೀಸ್ ಠಾಣೆ ಮೆಟ್ಟಿಲೇರಿದರೂ ಅವರ ವಿರುದ್ಧ ಕ್ರಮ ಜರುಗಿಸುತ್ತಿಲ್ಲ ಎಂದು ಹೊಲೆಮಾದಿಗರ ಸಂಘದ ರಾಜ್ಯಾಧ್ಯಕ್ಷ ಸಿದ್ದಪ್ಪ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ಈ ಬಗ್ಗೆ ಪ್ರಶ್ನಿಸಿದರೆ ಜಾತಿ ನಿಂದನೆ ಪ್ರಕರಣ ದಾಖಲಿಸುವುದಾಗಿ ಬೆದರಿಕೆ ಹಾಕುತ್ತಿದ್ದಾರೆ ಎಂದರು.

ನಿವಾಸಿ ಗಂಗಮ್ಮ ಮಾತನಾಡಿ, ಹಲವು ವರ್ಷಗಳಿಂದ ಆಲೂರಿನಲ್ಲೇ ಬಾಡಿಗೆ ಮನೆ ಮಾಡಿಕೊಂಡಿರುವ ಚಂದ್ರಕಲಾ ಸುತ್ತಲಿನವರೊಂದಿಗೆ ಕಾರಣವಿಲ್ಲದೆ ಜಗಳ ಮಾಡುತ್ತಾರೆ. ಯಾರಾದರೂ ಮಾತನಾಡಿದರೆ ಜಾತಿ ನಿಂದನೆ ಕೇಸು ದಾಖಲಿಸುತ್ತೇನೆಂದು ಹೆದರಿಸುತ್ತಾರೆ. ಹೀಗಾಗಿ ಬಡಾವಣೆಯ ಜನರು ನೆಮ್ಮದಿಯಿಂದ ಬದುಕಲು ಸಾಧ್ಯವಾಗುತ್ತಿಲ್ಲ ಎಂದರು. ನಿವಾಸಿಗಳೆಲ್ಲರೂ ಪೊಲೀಸ್ ಠಾಣೆಗೆ ದೂರು ನೀಡಿದಾಗ ಅಲ್ಲಿಗೂ ಬಂದು ಪೊಲೀಸರ ವಿರುದ್ಧವೇ ದೂರು ದಾಖಲಿಸುವುದಾಗಿ ಹೆದರಿಸಿದರು ಎಂದರು.



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

# ಜೀವ ಭಯದಲ್ಲೇ ತೂಗು ಸೇತುವೆ ಮೇಲೆ ಸಂಚಾರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಕಲಗೂಡು: ತಾಲ್ಲೂಕಿನ ಕೊಣನೂರು ಪಟ್ಟಣದ ಕಾವೇರಿ ನದಿಗೆ ನಿರ್ಮಿಸಲಾಗಿರುವ ತೂಗು ಸೇತುವೆ ಅಭಿವೃದ್ಧಿ ಕಾಣದೆ ಶಿಥಿಲಾವಸ್ಥೆ ತಲುಪಿದ್ದು ಸಾರ್ವಜನಿಕರು ಜೀವ ಭಯದಲ್ಲೇ ಸಂಚರಿಸುವಂತಾಗಿದೆ.

1995ರಲ್ಲಿ ಕಟ್ಟೆಪುರ-ಕೊಣನೂರು ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಉದ್ದೇಶದಿಂದ ತೂಗುಸೇತುವೆ ನಿರ್ಮಿಸಲಾಗಿದೆ. ಕಾವೇರಿ ನದಿ ಮಧ್ಯೆ ಹರಿದಿದ್ದರಿಂದ ಗ್ರಾಮಗಳ ಸಂಪರ್ಕ ಕಡಿತಗೊಂಡಿತ್ತು. ಗ್ರಾಮಸ್ಥರು ದೋಣಿ ಮೂಲಕ ಸಂಚಾರ ನಡೆಸುತ್ತಿದ್ದರು. ಅದರಿಂದ ಜನರ ಸಮಸ್ಯೆ ನಿವಾರಿಸಲು ಮುತುವರ್ಜಿ ವಹಿಸಿ ಸೇತುವೆ ನಿರ್ಮಿಸಲಾಗಿದೆ. ಅದು ನಂತರದ ದಿನಗಳಲ್ಲಿ ಸುಂದರ ಪ್ರವಾಸಿ ತಾಣವಾಗಿ ಸಾಕಷ್ಟು ಜನರನ್ನು ಆಕರ್ಷಿಸಿದೆ. ಶಾಲಾ ಕಾಲೇಜು ವಿದ್ಯಾರ್ಥಿಗಳು, ಹೊರ ಜಿಲ್ಲೆಯ ಪ್ರವಾಸಿಗರು, ಸ್ಥಳೀಯರು ಸೇರಿ ನಿತ್ಯ ಸಾವಿರಾರು ಜನರು ಭೇಟಿ ನೀಡುತ್ತಿದ್ದಾರೆ. 30 ವರ್ಷಗಳ ಸೇತುವೆ ಈಗ ಶಿಥಿಲಾವಸ್ಥೆ ತಲುಪಿದ್ದು ಜಿಲ್ಲಾಡಳಿತ ಅಥವಾ ಪ್ರವಾಸೋದ್ಯಮ ಇಲಾಖೆ ರಿಪೇರಿಗೆ ತಲೆ ಕೆಡಿಸಿಕೊಂಡಿಲ್ಲ. ತೂಗು ಸೇತುವೆ ದುರಸ್ತಿ ಕಾರ್ಯ ಮಾಡಬೇಕೆಂದು ಎರಡೂ ಗ್ರಾಮಗಳ ಜನರು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಮನವಿ ಸಲ್ಲಿಸುತ್ತಾ ಬಂದರೂ ಪ್ರಯೋಜನವಾಗಿಲ್ಲ. ಚುನಾವಣೆ ಸಂದರ್ಭದಲ್ಲಿ ಸೇತುವೆ ರಿಪೇರಿಯ ಭರವಸೆ ನೀಡುವ ಜನಪ್ರತಿನಿಧಿಗಳು ಆ ಬಳಿಕ ಮರೆತು ಬಿಡುತ್ತಾರೆ.

# ಅಪಘಾತದಲ್ಲಿ ವ್ಯಕ್ತಿ ಸಾವು ನಾಲ್ವರಿಗೆ ಗಾಯ


ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಖಾಸಗಿ ಬಸ್ ಹಾಗೂ ಆಲ್ಟೋ ಕಾರು ನಡುವೆ ಸಂಭವಿಸಿದ ಅಪಘಾತದಲ್ಲಿ ವ್ಯಕ್ತಿ ಮೃತಪಟ್ಟಿದ್ದು ನಾಲ್ವರು ಗಂಭೀರ ಗಾಯಗೊಂಡಿದ್ದಾರೆ.

ತಾಲ್ಲೂಕಿನ ಬೀರೂರು ಗೇಟ್ ಬಳಿ ಸೋಮವಾರ ದುರ್ಘಟನೆ ನಡೆದಿದೆ. ಕೆ.ಆರ್.ಪೇಟೆ ತಾಲ್ಲೂಕಿನ ಕಾಗೇಪುರ ಗ್ರಾಮದ ಶಿವಕುಮಾರ (46) ಮೃತರು. ಚನ್ನರಾಯಪಟ್ಟಣದಿಂದ ಮುಂಬೈಗೆ ತೆರಳುತ್ತಿದ್ದ ಕಾವೇರಿ ಖಾಸಗಿ ಬಸ್ ಹಾಗೂ ಅರಸೀಕೆರೆ ಕಡೆಯಿಂದ ಬರುತ್ತಿದ್ದ ಕೆಎ-19-ಬಿ-5207 ನಂಬರ್ ಅಲ್ಟೋ ಕಾರು ನಡುವೆ ಈ ಅಪಘಾತ ಸಂಭವಿಸಿದೆ. ಘಟನೆಯಲ್ಲಿ ಶಿವಕುಮಾರ ಸ್ಥಳದಲ್ಲೇ ಪ್ರಾಣ ಬಿಟ್ಟಿದ್ದಾರೆ. ಗಾಯಗೊಂಡ ಉಳಿದ ನಾಲ್ವರನ್ನು ಚನ್ನರಾಯಪಟ್ಟಣ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಸ್ಥಳಕ್ಕೆ ಚನ್ನರಾಯಪಟ್ಟಣ ಸಂಚಾರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

# ಕಾಡಾನೆ ಸೆರೆ ಕಾರ್ಯಾಚರಣೆ ಮುಗಿಸಿದ ಸಾಕಾನೆಗಳು

## ಎಂಟು ದಿನದಲ್ಲಿ ಮೂರು ಆನೆಗಳ ಸೆರೆ | ವಿಕ್ರಾಂತ್, ಮಖ್ನಾ ಆನೆ ಮೇಲೆ ಅರಣ್ಯ ಇಲಾಖೆ ನಿಗಾ


ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಬೈಕ್ ಸವಾರರು ಹಾಗೂ ಕೂಲಿ ಕಾರ್ಮಿಕರನ್ನು ಅಡ್ಡ ಗಟ್ಟುವುದು ಜಮೀನಿಗೆ ಲಗ್ಗೆಯಿಟ್ಟು ಬೆಳೆ ನಾಶ ಮಾಡುತ್ತಾ ಮಲೆನಾಡು ಜನರ ನೆಮ್ಮದಿ ಕೆಡಿಸಿದ್ದ ಮಖ್ನಾ ಆನೆ ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಭಾನುವಾರ ಯಶಸ್ವಿಯಾಗಿದ್ದಾರೆ. ಆ ಮೂಲಕ ಎಂಟು ದಿನಗಳಲ್ಲಿ ಮೂರು ಆನೆಗಳನ್ನು ಸೆರೆ ಹಿಡಿದು ಅರಣ್ಯ ಇಲಾಖೆ ಕೊಟ್ಟ ಭರವಸೆಯನ್ನು ಈಡೇರಿಸಿದೆ.

ತಾಲ್ಲೂಕಿನ ಹೆಬ್ಬನಹಳ್ಳಿ ಅರಣ್ಯ ಪ್ರದೇಶದಲ್ಲಿ ಕೈಗೊಂಡಿದ್ದ ಕಾರ್ಯಾಚರಣೆಯಲ್ಲಿ ಆನೆ ಸೆರೆಯಾಗಿದೆ. ಮತ್ತಿಗೋಡು ಹಾಗೂ ದುಬಾರೆ ಶಿಬಿರದಿಂದ ಬಂದಿರುವ ಕುಮ್ಕಿ ಆನೆಗಳು ಕ್ಯಾಂಪ್‌ಗೆ ಮರಳಲು ಸಜ್ಜಾಗಿವೆ.

ಸಿಬ್ಬಂದಿ ಮಖ್ನಾ ಆನೆಯು ಹೆಬ್ಬನಹಳ್ಳಿ ಅರಣ್ಯ ಪ್ರದೇಶದಲ್ಲಿ ಕಾಡಾನೆಗಳೊಂದಿಗೆ ಇರುವುದನ್ನು ಖಚಿತಪಡಿಸಿದರು.

ಆಗ ಅರಣ್ಯ ಇಲಾಖೆ ಅಧಿಕಾರಿ, ಮಾವುತರು ಹಾಗೂ ಕಾವಾಡಿಗರು ಏಳು ಸಾಕಾನೆಗಳೊಂದಿಗೆ ಕ್ಯಾಂಪ್‌ನಿಂದ ಪ್ರಯಾಣ ಬೆಳೆಸಿದರು. ಬೆಳಿಗ್ಗೆ 11.30ರ ಸಮಯದಲ್ಲಿ ಮಖ್ನಾ ಆನೆಯನ್ನು ಕಾಡಾನೆಗಳಿಂದ ಬೇರ್ಪಡಿಸಿ ಅರವಳಿಕೆ ಚುಚ್ಚುಮದ್ದು ನೀಡಲಾಯಿತು. ಅರೆಪ್ರಜ್ಞಾವಸ್ಥೆಗೆ ತಲುಪಿದ ಕಾಡಾನೆಯನ್ನು ಸುತ್ತುವರೆದ ಸಾಕಾನೆಗಳು ಬಂಧಿಯಾಗಿಸಿದವು. ಈ ವೇಳೆ ಆನೆಯು ಘೀಳಿಡುತ್ತಾ ಸಾಕಾನೆಗಳ ಮೇಲೆಯೇ ದಾಳಿ ಮಾಡಿತು. ಸತತ ಮೂರು ಗಂಟೆಗಳ ಕಾಲ ಶ್ರಮಪಟ್ಟು ಕಾಡಾನೆಗೆ ಹಗ್ಗ ಕಟ್ಟಿ ರಸ್ತೆಗೆ ಎಳೆದು ತಂದು ಕ್ರೇನ್ ಮೂಲಕ ಲಾರಿಗೆ ಹತ್ತಿಸಲಾಯಿತು. ಸಿಟ್ಟಿಗೆದ್ದ ಆನೆ ಲಾರಿಯಿಂದ ತಪ್ಪಿಸಿಕೊಳ್ಳಲು ಶತಾಯಗತಾಯ ಹೋರಾಡಿದರೂ ಸಾಧ್ಯವಾಗಲಿಲ್ಲ. ಸೆರೆ ಸಿಕ್ಕ ಅಂದಾಜು 15 ವರ್ಷದ ಆನೆಯನ್ನು ಸಕ್ಕರೆಬೈಲು ಶಿಬಿರಕ್ಕೆ ಸ್ಥಳಾಂತರಿಸಲಾಯಿತು.




### ನಿರಂತರ ಸವಾಲು

ಈ ಬಾರಿಯ ಕಾಡಾನೆ ಸೆರೆ ಕಾರ್ಯಾಚರಣೆ ಅರಣ್ಯ ಇಲಾಖೆಗೆ ಭಾರೀ ಸವಾಲಾಗಿತ್ತು. ಆನೆಗಳ ಹಾವಳಿಯಿಂದ ಅಪಾರ ಸಾವು-ನೋವು ಹಾಗು ಬೆಳೆ ನಷ್ಟವಾಗಿದ್ದರಿಂದ ಸಾರ್ವಜನಿಕರು ಆಕ್ರೋಶಗೊಂಡಿದ್ದರು. ಜೊತೆಗೆ ವಿಕ್ರಾಂತ್‌ನ ಸೆರೆ ಕಾರ್ಯಾಚರಣೆಗಾಗಿ ಎರಡು ದಿನಗಳ ವಿಫಲ ಯತ್ನ ನಡೆಯಿತು. ವಿಕ್ರಾಂತ್‌ನು ಕಾಡಾನೆಗಳಿಂದ ಹೊರಗೆ ಬಾರದೆ ಇರುವುದು ಹಾಗೂ ಕಾರ್ಯಾಚರಣೆ ಸ್ಥಳಕ್ಕೆ ಭೀಮನು ಪ್ರವೇಶ ನೀಡುತ್ತಿದ್ದರಿಂದ ಸಿಬ್ಬಂದಿ ಅಪಾಯಕ್ಕೆ ಸಿಲುಕಬೇಕಾದ ಪರಿಸ್ಥಿತಿಯೂ ನಿರ್ಮಾಣವಾಗಿತ್ತು.

ಎಲ್ಲಾ ಸವಾಲುಗಳನ್ನು ಮೆಟ್ಟಿ ಅರಣ್ಯ ಹಾಗೂ ಪೊಲೀಸ್ ಇಲಾಖೆಯ 200ಕ್ಕೂ ಹೆಚ್ಚು ಸಿಬ್ಬಂದಿ, ಮಾವುತರು ಹಾಗೂ ಕಾವಾಡಿಗರ ನೆರವಿನಿಂದ ಮೂರು ಕಾಡಾನೆಗಳನ್ನು ಸೆರೆ ಹಿಡಿಯಲಾಗಿದೆ. ಅದರಿಂದ ಮಲೆನಾಡು ಭಾಗದ ಜನರು ತುಸು ನಿರಾಳರಾಗಿದ್ದಾರೆ.

### ಕಾರ್ಯಾಚರಣೆ ಯಶಸ್ವಿ

ಬೇಲೂರು ತಾಲ್ಲೂಕಿನಲ್ಲಿ ಕಾಡಾನೆ ದಾಳಿಯಿಂದ ಒಂದು ತಿಂಗಳಲ್ಲಿ ನಾಲ್ವರು ಮೃತಪಟ್ಟದ್ದರಿಂದ ಉಪಟಳ ನೀಡುತ್ತಿರುವ ಕಾಡಾನೆಗಳ ಸೆರೆ ಹಿಡಿಯಲೇಬೇಕೆಂದು ಸ್ಥಳೀಯರು ಪ್ರತಿಭಟನೆ ನಡೆಸಿದ್ದರು. ಸ್ಥಳಕ್ಕೆ ಸಂಸದ ಶ್ರೇಯಸ್ ಪಟೇಲ್, ಜಿಲ್ಲಾಡಳಿತದ ಎಲ್ಲಾ ಅಧಿಕಾರಿಗಳು ಭೇಟಿ ನೀಡಿ ಕಾರ್ಯಾಚರಣೆ ಆರಂಭಿಸುವ ಭರವಸೆ ನೀಡಿದ್ದರು. ಅರಣ್ಯ ಸಚಿವ ಈಶ್ವರ್ ಖಂಡ್ರೆ ಸಹ ಸಂಸದರೊಂದಿಗೆ ದೂರವಾಣಿ ಮೂಲಕ ಮಾತನಾಡಿ ತೊಂದರೆ ನೀಡುತ್ತಿರುವ ಆನೆಗಳ ಸೆರೆ ಹಿಡಿಯುವ ಭರವಸೆ ನೀಡಿದ್ದರು. ಅದರಂತೆ ಮಾ. 15 ರಂದು ಬೇಲೂರು ತಾಲ್ಲೂಕಿನ ಬಿಕ್ಕೋಡು ಕ್ಯಾಂಪ್‌ಗೆ ಹರ್ಷ, ಧನಂಜಯ, ಕರ್ನಾಟಕ ಭೀಮ, ಏಕಲವ್ಯ, ಮಹೇಂದ್ರ, ಪ್ರಶಾಂತ್ ಸಾಕಾನೆಗಳು ಬಂದಿದ್ದವು. ಮಾ. 16ರಂದು ಬೇಲೂರಿನ ಹಳ್ಳಿಗದ್ದೆ ಸಮೀಪ 18 ವರ್ಷದ ಗಂಡಾನೆಯನ್ನು ಸೆರೆ ಹಿಡಿದರೆ ಮಾ. 20 ರಂದು ವಾಟೇಹಳ್ಳಿ ಸಮೀಪ ವಿಕ್ರಾಂತ್ ಹೆಸರಿನ ದೈತ್ಯಾಕಾರದ ಆನೆಯನ್ನು ಸೆರೆ ಹಿಡಿಯಲಾಯಿತು. ಮಾ. 23ರ ಭಾನುವಾರ ಮತ್ತೊಂದು ಆನೆ ಅರಣ್ಯ ಇಲಾಖೆ ವಶವಾಗಿದೆ.



# ಹಾಸನದಲ್ಲಿ ಭಗತ್ ಸಿಂಗ್ ಪುಣ್ಯ ತಿಥಿ



ಹಾಸನ: ಭಗತ್ ಸಿಂಗ್ ಅವರ ರಾಷ್ಟ್ರಪ್ರೇಮ, ಪ್ರಖರ ಭಾಷಣ ಹಾಗೂ ಸ್ಪಷ್ಟ ನಿಲುವು ಸ್ವಾತಂತ್ರ್ಯ ಹೋರಾಟದಲ್ಲಿ ಲಕ್ಷಾಂತರ ಜನರು ಪಾಲ್ಗೊಳ್ಳುವಂತೆ ಮಾಡಿತು. ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ ಅವರನ್ನು ಪ್ರತಿಯೊಬ್ಬರು ಸ್ಮರಿಸಬೇಕು ಎಂದು ಎಐಡಿಎಸ್‌ಓ ರಾಜ್ಯ ಉಪಾಧ್ಯಕ್ಷೆ ಚಂದ್ರಕಲಾ ಹೇಳಿದರು.

ನಗರದ ಮಹಾರಾಜ ಪಾರ್ಕ್ ಹಾಗೂ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದ ಇಂದು ಭಗತ್ ಸಿಂಗ್, ಸುಖದೇವ್ ಮತ್ತು ರಾಜಗುರು ಅವರ ಹುತಾತ್ಮ ದಿನಾಚರಣೆಯಲ್ಲಿ ಮಾತನಾಡಿ, ಮೂವರು ಸ್ವಾತಂತ್ರ್ಯದ ಬಗೆಗಿನ ತಮ್ಮ ವಿಚಾರವನ್ನು ಪ್ರಖರವಾಗಿ ತೆರೆದಿಟ್ಟರು. ಆದ್ದರಿಂದಲೇ ಭಗತ್ ಸಿಂಗ್‌ರ ಅನುಯಾಯಿಗಳ ಸಂಖ್ಯೆ ಹೆಚ್ಚಾಯಿತು. ಕೇವಲ ಸ್ವಾತಂತ್ರ್ಯ ಪಡೆಯುವುದು ಉದ್ದೇಶವಲ್ಲ. ಬ್ರಿಟೀಷರಿಂದ ಪಡೆದ ಸ್ವಾತಂತ್ರ್ಯ ದೇಶದ ಕೆಲವೇ ಶ್ರೀಮಂತ ವರ್ಗಕ್ಕೆ ವರ್ಗಾವಣೆಯಾದರೆ ಅದು ನಿಜವಾದ ಸ್ವಾತಂತ್ರ್ಯವಲ್ಲ ಎನ್ನುವುದು ಭಗತ್ ಸಿಂಗ್‌ರ ನಿಲುವಾಗಿತ್ತು. ಯಾವ ರಾಷ್ಟ್ರ ತನ್ನೆಲ್ಲ ಜನರಿಗೆ ಸಮಾನವಾಗಿ ಬದುಕುವ ಹಕ್ಕನ್ನು ನೀಡುತ್ತದೆಯೋ, ಯಾವ ರಾಷ್ಟ್ರ ಧರ್ಮದ ಹೆಸರಿನಲ್ಲಿ ಜನರನ್ನು ಒಡೆಯುವುದಿಲ್ಲವೋ, ಮನುಷ್ಯನ ಶೋಷಣೆಯನ್ನು ಕೊನೆಗಾಣಿಸುವುದೋ ಅದುವೇ ಸ್ವಾತಂತ್ರ್ಯ ರಾಷ್ಟ್ರವೆಂದು ಪ್ರತಿಪಾದಿಸಿದ್ದರು ಎಂದು ವಿವರಿಸಿದರು.

ಶಿಕ್ಷಣದ ವ್ಯಾಪಾರಿಕರಣ, ನಿರುದ್ಯೋಗ, ಹಸಿವು, ಬಡತನ, ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯ ಮುಂತಾದ ಸಮಸ್ಯೆಗಳನ್ನು ತಡೆಯಲು ಹಾಗೂ ಶಿಕ್ಷಣ-ಮಾನವತೆ-ಸಂಸ್ಕೃತಿ ಉಳಿಸಲು, ಅನ್ಯಾಯದ ವಿರುದ್ಧ ಧ್ವನಿ ಎತ್ತಲು ಭಗತ್ ಸಿಂಗ್ ಅವರ ವಿಚಾರಗಳಿಂದ ಸ್ಫೂರ್ತಿ ಪಡೆದು ಹೋರಾಟ ನಡೆಸಲಾಗುತ್ತಿದೆ.

ಎಐಡಿಎಸ್‌ಓ ಜಿಲ್ಲಾ ಸಂಚಾಲಕಿ ಚೈತ್ರ, ಕಾರ್ಯಕರ್ತರಾದ ಸುಷ್ಮಾ, ಮಮತಾ, ಶಾಮಲಾ ಇತರರಿದ್ದರು.

# ಜಿನ್ನೇನಹಳ್ಳಿ ಸಹಕಾರ ಸಂಘಕ್ಕೆ ರಾಮೇಗೌಡ ಅಧ್ಯಕ್ಷ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ತಾಲ್ಲೂಕಿನ ಜಿನ್ನೇನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಸ್ಥಾನಕ್ಕೆ ಜೆ.ಬಿ.ರಾಮೇಗೌಡ ಹಾಗೂ ಉಪಾಧ್ಯಕ್ಷರಾಗಿ ಜಯಲಕ್ಷ್ಮಮ್ಮ ಅವಿರೋಧ ಆಯ್ಕೆಯಾದರು.

ಸಹಕಾರ ಸಂಘವು 11 ಮಂದಿ ನಿರ್ದೇಶಕರ ಬಲ ಹೊಂದಿದ್ದು ಕಳೆದ ತಿಂಗಳು 5 ವರ್ಷದ ಅವಧಿಗೆ ನಡೆದ ಚುನಾವಣೆಯಲ್ಲಿ 11 ಮಂದಿ ನಿರ್ದೇಶಕರು ಸಹ ಅವಿರೋಧವಾಗಿ ಆಯ್ಕೆಯಾಗಿದ್ದರು.

ಈ ಹಿನ್ನೆಲೆಯಲ್ಲಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಿಗದಿಯಾಗಿತ್ತು.



ಅಧ್ಯಕ್ಷ ಸ್ಥಾನಕ್ಕೆ ಜೆ.ಬಿ. ರಾಮೇಗೌಡ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಜಯಲಕ್ಷ್ಮಮ್ಮ ಹೊರತುಪಡಿಸಿ ಮತ್ಯಾರು ನಾಮಪತ್ರ ಸಲ್ಲಿಸದ ಕಾರಣ ಇಬ್ಬರನ್ನೇ ಆಯ್ಕೆ ಮಾಡಲಾಯಿತು.

ಸಹಕಾರ ಇಲಾಖೆಯ ಅಧಿಕಾರಿ ಸಾವಿತ್ರಮ್ಮ ಚುನಾವಣಾ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದರು. ಅವಿರೋಧವಾಗಿ ಆಯ್ಕೆಯಾದ ಅಧ್ಯಕ್ಷ ಹಾಗೂ ಉಪಾಧ್ಯಕ್ಷರಿಗೆ ಗಣ್ಯರು, ಮುಖಂಡರು ಮತ್ತು ಸಂಘದ ವತಿಯಿಂದ ಅಭಿನಂದಿಸಲಾಯಿತು.

ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಎಚ್.ಜಿ. ರಾಮಕೃಷ್ಣ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಜೆ.ಎಸ್. ಮಂಜುನಾಥ್, ಮುಖಂಡ ಜೆ.ಜೆ. ಧನಂಜಯ, ಜೆ.ಡಿ. ಮಂಜುನಾಥ್, ನಿರ್ದೇಶಕರಾದ ಜೆ.ಎನ್. ಅಂಜನ್, ಜೆ.ಎನ್. ಲೋಕೇಶ್, ಜೆ.ಎಸ್. ವಾಸುದೇವ, ಜೆ.ಕೆ. ನಾಗರಾಜೇಗೌಡ, ದೊಡ್ಡೇಗೌಡ, ಯಶವಂತ್, ಎನ್.ಎನ್. ರಾಜು, ಎಂ.ಎನ್. ಕೆಂಪೇಗೌಡ, ತಾಯಮ್ಮ, ಕಾರ್ಯ ನಿರ್ವಹಣಾಧಿಕಾರಿ ಜೆ.ಸಿ. ಮೋಹನ್ ಕುಮಾರ್, ಸಿಬ್ಬಂದಿ ಜೆ.ಕೆ .ರಾಕೇಶ್, ನಂಜೇಗೌಡ ಹಾಗೂ ಇತರರು ಇದ್ದರು.

# ಬೂವನಹಳ್ಳಿ ಪಿಕೆಪಿಎಸ್: ಜೆಡಿಎಸ್ ಬೆಂಬಲಿತರ ಗೆಲುವು



ಹಾಸನ: ತಾಲ್ಲೂಕಿನ ಬೂವನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿ ನಿರ್ದೇಶಕ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ 6, ಕಾಂಗ್ರೆಸ್ ಹಾಗೂ ಬಿಜೆಪಿ ಬೆಂಬಲಿತ 5 ಸದಸ್ಯರು ಗೆಲುವು ಸಾಧಿಸಿದ್ದಾರೆ. ಸಾಲಗಾರರಲ್ಲದ ಕ್ಷೇತ್ರದಿಂದ ಬಿ.ಆರ್. ಬೊಮ್ಮೇಗೌಡ ಗೆಲುವು ದಾಖಲಿಸಿದ್ದಾರೆ. ಸಾಲಗಾರರ ಕ್ಷೇತ್ರದಿಂದ ಬಿ.ಕೆ. ಗಣೇಶ್, ಬಿ.ಜೆ. ರವಿಕುಮಾರ್, ಬಿ.ಎನ್. ದುರ್ಗಾಪ್ರಸಾದ್, ಬಿ.ಡಿ. ಚರಣ್, ಬಿ.ಡಿ. ಸೋಮೇಶ್, ಇಂದ್ರಮ್ಮ, ವಿಜಯಲಕ್ಷ್ಮಿ, ನಾಗರಾಜು, ಹೆಚ್.ಕೆ. ಶಿವಸ್ವಾಮಿ, ಬಿ.ಡಿ. ಕರಿಯಯ್ಯ ಗೆಲುವಿನ ಪತಾಕೆ ಹಾರಿಸಿದ್ದಾರೆ. ಪರಿಶಿಷ್ಟ ಪಂಗಡಕ್ಕೆ ಮೀಸಲಿದ್ದ ಒಂದು ಸ್ಥಾನ ಖಾಲಿ ಇದೆ. ಸಹಕಾರ ಇಲಾಖೆಯ ವಾಸಿಂ ಚುನಾವಣಾ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದರು.

# ಗುರು ಹಿರಿಯರ ಸಲಹೆ ಪಾಲಿಸಬೇಕು: ಚುಂಚಶ್ರೀ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಯಾವುದೇ ಮಹತ್ಕಾರ್ಯದಲ್ಲಿ ತೊಡಗಬೇಕೆಂದರೆ ಗುರು ಹಿರಿಯರ ಸಲಹೆ ಇರಬೇಕು. ಗ್ರಾಮಗಳ ಅಭಿವೃದ್ಧಿಯಲ್ಲಿ ಪರಸ್ಪರ ಸೌಹಾರ್ದತೆ, ಸಹಕಾರ ಮನೋಭಾವ ಅನಿವಾರ್ಯ ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಬಾಗೂರು ಕೇಂದ್ರದ ಶಕ್ತಿದೇವತೆ ಶ್ರೀ ಸಂತೆಕಾಳೇಶ್ವರಿ ಹಾಗೂ ಚಿಕ್ಕಮ್ಮದೇವಿ ದೇವಾಲಯಗಳ ಲೋಕಾರ್ಪಣೆ ಸಮಾರಂಭ ಉದ್ಘಾಟಿಸಿ ಮಾತನಾಡಿದ ಶ್ರೀಗಳು, ಮಹಾಭಾರತದ ಧರ್ಮರಾಯ ಏನೇ ಕೆಲಸ ಮಾಡಬೇಕೆಂದರು ತಂದೆ-ತಾಯಿ ಹಾಗೂ ಗುರುಗಳ ಮಾರ್ಗದರ್ಶನ ಪಡೆಯುತ್ತಿದ್ದ. ಆದರೆ ದುರ್ಯೋಧನ ಯಾರ ಮಾತಿಗೂ ಕಿವಿಗೊಡದೆ ಕುರುಕ್ಷೇತ್ರ ಯುದ್ಧದಲ್ಲಿ ಸೋಲಬೇಕಾಯಿತು. ಯಾವುದೇ ಮಹತ್ಕಾರ್ಯದಲ್ಲಿ ತೊಡಗಬೇಕೆಂದರೆ ಗುರು ಹಿರಿಯರ ಸಲಹೆ ಇರಬೇಕು. ಗ್ರಾಮಗಳ ಅಭಿವೃದ್ಧಿಯಲ್ಲೂ ಪರಸ್ಪರ ಸೌಹಾರ್ದತೆ, ಸಹಕಾರ ಮನೋಭಾವ ಅನಿವಾರ್ಯ ಎಂದರು.



16 ಗ್ರಾಮಗಳ ಗ್ರಾಮಸ್ಥರ ನೆರವಿನೊಂದಿಗೆ ಶ್ರೀ ಸಂತೇ ಕಾಳೇಶ್ವರಿ ದೇವಾಲಯ ಸುಂದರವಾಗಿ ನಿರ್ಮಾಣಗೊಂಡು ಲೋಕಾರ್ಪಣೆಯಾಗಿದೆ. ಸಂತೆ ಕಾಳೇಶ್ವರಿ ದೇವಿ ಬಂಗಾಳದ ಕಾಳಿದೇವಿ ಮೂರ್ತ ರೂಪಳು ಎಂದರು.

ಶ್ರೀ ಆದಿಚುಂಚನಗಿರಿ ಮಠದ ವತಿಯಿಂದ ಜಗತ್ತಿನ ವಿವಿಧೆಡೆ ವೈದ್ಯಕೀಯ, ಎಂಜಿನೀಯರಿಂಗ್ ಸೇರಿ ಅನೇಕ ವೃತ್ತಿಪರ ಕಾಲೇಜು ನಡೆಸಲಾಗುತ್ತಿದೆ. ಆದರೆ ಕೃಷಿ ಕಾಲೇಜನ್ನು ಮಾತ್ರ ಶ್ರೀ ಮಠದ ವತಿಯಿಂದ ತೆರೆಯಲು ಸಾಧ್ಯವಾಗಿರಲಿಲ್ಲ. ಕೃಷಿ ಸಚಿವರು ಮನವಿಗೆ ಸ್ಪಂದಿಸಿ ಮಂಡ್ಯದಲ್ಲಿ ಕೃಷಿ ವಿಶ್ವವಿದ್ಯಾಲಯ ಸ್ಥಾಪನೆಗೆ ಮುಂದಾಗಿದ್ದಾರೆ. ಅದರಿಂದ ಜಿಲ್ಲೆಯ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಎಂದು ಹೇಳಿದರು.

ಕೃಷಿ ಸಚಿವ ಎನ್. ಚೆಲುವರಾಯಸ್ವಾಮಿ ಮಾತನಾಡಿ, ಗ್ರಾಮಸ್ಥರು ಹಾಗೂ ಭಕ್ತರ ನೆರವಿನಿಂದ ಶ್ರೀ ಸಂತೆಕಾಳೇಶ್ವರ ದೇವಾಲಯ ನಿರ್ಮಾಣಗೊಂಡಿದೆ. ಶ್ರೀ ಆದಿಚುಂಚನಗಿರಿ ಸಂಸ್ಥಾನ ಮಠವು ಶಿಕ್ಷಣ ಕ್ಷೇತ್ರಕ್ಕೆ ಒತ್ತು ನೀಡುತ್ತಿದೆ. ಅದರಿಂದ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಶಿಕ್ಷಣದ ಜೊತೆಗೆ ವಸತಿಯು ಸಿಗುವಂತಾಗಿದೆ. ಕೃಷಿ ಕ್ಷೇತ್ರದಲ್ಲಿ ಬದಲಾವಣೆ ತರುವ ದೃಷ್ಟಿಯಿಂದ ಕೃಷಿ ಇಲಾಖೆಯ ಮೂಲಕ ಅನೇಕ ರೈತ ಸ್ನೇಹಿತ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿದೆ ಎಂದರು.

ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ. ಗೋಪಾಲಸ್ವಾಮಿ ಮಾತನಾಡಿ, ತಾಲ್ಲೂಕಿನ ಹಿರಿಸಾವೆ ಕಲ್ಲೇಸೋಮನಹಳ್ಳಿ, ಸಂತೇಶಿವರ ಏತ ನೀರಾವರಿ ಯೋಜನೆಗಳು ಸೇರಿ ಅನೇಕ ಅಭಿವೃದ್ಧಿ ಕೆಲಸಗಳಿಗೆ ರಾಜ್ಯ ಸರ್ಕಾರ ಸಹಕಾರ ನೀಡುತ್ತಿದೆ. ಶ್ರೀ ಸಂತೆಕಾಳೇಶ್ವರಿ ದೇವಾಲಯ ನಿರ್ಮಾಣಕ್ಕೂ ನೀರಾವರಿ ಯೋಜನೆಯ ಮೂಲಕ 65 ಲಕ್ಷ ರೂ. ಅನುದಾನ ನೀಡಿದೆ ಎಂದರು.

ದೇವಾಲಯ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಬಾಗೂರು ಮಂಜೇಗೌಡ, ಉಪಾಧ್ಯಕ್ಷ ಬಿ.ಹೆಚ್. ಶಿವಣ್ಣ ಮಾತನಾಡಿದರು.

ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ, ಸಚಿವ ಎನ್. ಚೆಲುವರಾಯಸ್ವಾಮಿ ಧರ್ಮಪತ್ನಿ ಧನಲಕ್ಷ್ಮಿ, ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಬಿ.ಪಿ. ಕೃಷ್ಣೇಗೌಡ, ದೇವಾಲಯ ಜೀರ್ಣೋದ್ಧಾರ ಸಮಿತಿ ಕಾರ್ಯದರ್ಶಿ ದಕ್ಷಿಣ ಮೂರ್ತಿ, ಕಾಂಗ್ರೆಸ್ ಯುವ ಮುಖಂಡ ಯುವರಾಜ್ ಇತರರಿದ್ದರು.

# ದ್ವೇಷದ ಮಧ್ಯೆ ಪ್ರೀತಿಯ ಸಂಜೀವಿನಿಯಾದ ಗುರುನಾನಕ ದೇವ

– ರಜನೀಶ್ ಸಾಗರ

ಪುಸ್ತಕ ವಿಮರ್ಶೆ




ಒಂದೇ ಆಕಾಶ, ಒಂದೇ ನೆಲ, ಒಂದೇ ಧಾನ್ಯ, ಒಂದೇ ನೀರು, ಒಂದೇ ಗಾಳಿಯನ್ನು ಬಳಸುವ ಮನುಷ್ಯರ ನಡುವೆ ವೈಷಮ್ಯ ಬಂದದ್ದು ಹೇಗೆ? ಆದರೆ ದುರ್ದೈವದಿಂದ ನೆಲಕ್ಕಾಗಿಯೇ, ಧಾನ್ಯಕ್ಕಾಗಿಯೇ, ನೀರಿಗಾಗಿಯೇ, ಗಾಳಿಗಾಗಿಯೇ ಮನುಷ್ಯ ಹೋರಾಟ ಮಾಡುತ್ತಿದ್ದಾನೆ. ಅವುಗಳೇ ವೈಷಮ್ಯಕ್ಕೆ ಕಾರಣಗಳಾಗಿವೆ. ಕುಲ, ಜಾತಿ, ಧರ್ಮ,ಲಿಂಗ, ಭಾಷೆ, ಭೌಗೋಳಿಕ ಗಡಿಗಳು, ನಂಬಿಕೆಗಳು, ಆಚಾರ ವಿಚಾರಗಳು ಇವೆಲ್ಲವುಗಳಲ್ಲಿ ಭೇದ ಸೇರಿದೆ. ಭಿನ್ನತೆಯಿಂದ ತೊಂದರೆ ಇಲ್ಲ ಆದರೆ ಅದು ದ್ವೇಷಕ್ಕೆ ತಿರುಗಿದಾಗ ಜೀವನ ಕುಲುಮೆಯಾಗುತ್ತದೆ. ಇಂದು ಪ್ರಪಂಚದಲ್ಲಿ ನಾವು ಕಾಣುವ ದ್ವೇಷಮಯ ವಾತಾವರಣ ಕಂಗಾಲು ಮಾಡುತ್ತದೆ. ಎಲ್ಲರೂ ಪ್ರೇಮದಿಂದ ಇರಲು ಸಾಧ್ಯವಿಲ್ಲವೇ. ಬಿನ್ನ ಚಿಂತನೆಯ ಜನರನ್ನು ಒಂದುಗೂಡಿಸುವುದು ಹೇಗೆ.

ಅದನ್ನು ಯಾರು ಮಾಡಬೇಕು? ಇವೆಲ್ಲ ಪ್ರಶ್ನೆಗಳೇ. ಉತ್ತರ ದೊರಕದಿರುವ ಪ್ರಶ್ನೆಗಳು. ಧರ್ಮ ಗುರುಗಳು ಈ ಕಾರ್ಯವನ್ನು ಮಾಡಬಹುದೇ, ಮಾಡಬಹುದು. ಆದರೆ ಅವರೇ ಬಹಳಷ್ಟು ಬಾರಿ ವಿಘಟನೆಗೆ ವೈಷಮ್ಯಕ್ಕೆ ಕಾರಣವಾದದ್ದು ಉಂಟು. ಹೀಗೆ ಅಸಹನೀಯ ದ್ವೇಷದ ವಾತಾವರಣದಲ್ಲಿ ಉಸಿರಾಡುವುದು ಕಷ್ಟವೆನಿಸಿದಾಗ ಸಮಾಧಾನದ ತಂಗಾಳಿ ಬಂದಂತೆ, ಗುರುನಾನಕರ ನೆನಪು ಬರುತ್ತದೆ.

ಐದು ನೂರು ವರ್ಷಗಳ ಹಿಂದೆ ಇದೇ ತರದ ದ್ವೇಷದ ವಿಷಕಾರಿ ಹರಡಿದಾಗ, ಸಮಾನತೆಯ ಸಮನ್ವಯತೆಯ ಪ್ರೀತಿಯ ಸಂಜೀವಿನಿಯನ್ನು ಹರಡಿದವರು ಗುರು ನಾನಕ ದೇವರು.

ಸಿಖ್ ಧರ್ಮದ ಸ್ಥಾಪಕರು. ಮೊದಲ ಗುರುವಾದ ನಾನಕ ದೇವರು, ಜಾತಿ ವ್ಯವಸ್ಥೆ, ಮೂಢನಂಬಿಕೆ, ಸಾಮಾಜಿಕ ಅನ್ಯಾಯಗಳನ್ನು ತಿರಸ್ಕರಿಸಿದರು. ಇಡೀ ಮಾನವ ಕುಲವೊಂದೇ ದೈವಿಕ ಶಕ್ತಿಯಿಂದ ಬದ್ಧವಾಗಿದೆ ಎಂದು ಉಪದೇಶಿಸಿದರು.

ಸದಾ ದೇವರ ಹೆಸರನ್ನು ಜಪಿಸುವುದು ಪ್ರಾಮಾಣಿಕವಾಗಿ ದುಡಿಯುವುದು ಮತ್ತು ತಮ್ಮಲ್ಲಿ ಇರುವುದನ್ನು ಅಗತ್ಯವಿರುವವರೊಡನೆ ಹಂಚಿಕೊಳ್ಳುವುದು ಎಂಬ ಸುಲಭ ಮೂರು ಸೂತ್ರಗಳನ್ನು ನೀಡಿ ಜನಸಾಮಾನ್ಯರನ್ನು ಒಗ್ಗೂಡಿಸಿದರು.

ಅವರೇ ಹೇಳಿದಂತೆ ಕತ್ತರಿಸಿ ಕತ್ತರಿಯ ಕೆಲಸ ಕತ್ತರಿಸುವುದು ಬೇರ್ಪಡಿಸುವುದು. ಸೂಜಿ ತುಂಡುಗಳನ್ನು ಸೇರಿಸಿ ಒಂದು ಮಾಡುತ್ತದೆ. ನಾನಕರು ಬದುಕಿನ ಉದ್ದಕ್ಕೂ ಮಾಡಿದ್ದು ಸಮಾಜವನ್ನು ಒಂದುಗೂಡಿಸುವ ಸೂಜಿಯ ಕೆಲಸ. ಇಂದು ಅಂತಹ ಕಾರ್ಯ ತ್ವರಿತವಾಗಿ ಆಗಬೇಕಿದೆ ನೆಲ ಅಂತ ಚೇತನಕ್ಕಾಗಿ ಕಾಯುತ್ತಿದೆ.

ಐದು ನೂರು ವರ್ಷಗಳ ಹಿಂದೆ ಬದುಕಿದ ಗುರುನಾನಕ ದೇವರ ಜೀವನ ಕೆಲವರಿಗಾದರೂ ಪ್ರೇರಣೆ ನೀಡಿದರೆ, ದ್ವೇಷದ ಬೆಂಕಿಯನ್ನು ಕೊಂಚವಾದರೂ ತಣ್ಣಗಾಗಿಸಿದರೆ, ಈ ಪುಟ್ಟ ಗ್ರಂಥ ತನ್ನ ಸಫಲತೆಯನ್ನು ಪಡೆದಂತೆ. ನಿಜವಾಗಿಯೂ ಓದುಗನಲ್ಲಿ ಒಳ್ಳೆಯ ಭಾವನೆಯನ್ನು ಈ ಕೃತಿ ಮೂಡಿಸುವುದರಲ್ಲಿ ಯಾವುದೇ ಅನುಮಾನವಿಲ್ಲ. ಶ್ರೀಸಾಮಾನ್ಯರಿಗೂ ಮತ್ತು ತರುಣ ತರುಣಿಯರಿಗೂ ಇದು ಖಂಡಿತಕ್ಕೂ ಪ್ರಿಯವಾಗುತ್ತದೆ. ಈ ಕೃತಿಯ ಲೇಖಕರು ಹೆಸರಾಂತ ವಾಗ್ಮಿಗಳು, ಅದ್ಭುತ ಬರಹಗಾರರು ಆದ ಡಾ. ಗುರುರಾಜ ಕರ್ಜಗಿರವರು. 94 ಪುಟಗಳನ್ನು ಹೊಂದಿರುವ ಕೃತಿ 125 ರೂ. ಮುಖಬೆಲೆಯನ್ನು ಹೊಂದಿದೆ. ಆಸಕ್ತ ಓದುಗರಿಗೆ ಸಾಗರದ ರವೀಂದ್ರ ಪುಸ್ತಕಾಲಯದಲ್ಲಿ ರಿಯಾಯಿತಿ ದರದಲ್ಲಿ ದೊರಕುತ್ತದೆ.

# ಭಾರತದಲ್ಲಿ ಮಹಿಳೆಯರಿಗೆ ಗೌರವ ಸ್ಥಾನ : ಶೈಲಜಾ ಹಾಸನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಯರಿಗೆ ಪೂಜನೀಯ ಸ್ಥಾನಮಾನ ನೀಡಲಾಗಿದ್ದು, ತಲೆತಲಾಂತರದಿಂದಲೂ ಸಂಸ್ಕೃತಿ ಮುಂದುವರೆದಿದೆ ಎಂದು ಸಾಹಿತಿ ಶೈಲಜಾ ಹಾಸನ ತಿಳಿಸಿದರು.

ನಗರದ ಕುರುಹಿನಶೆಟ್ಟಿ ಕಲ್ಯಾಣ ಮಂಟಪದಲ್ಲಿ ಮಾನವ ಹಕ್ಕುಗಳ ಒಕ್ಕೂಟ ಜಿಲ್ಲಾ ಘಟಕದಿಂದ ಹಮ್ಮಿಕೊಂಡಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಾತನಾಡಿ, ಮಹಿಳೆಗೆ ಗೌರವ ನೀಡುವ ಸಮಾಜ ನಮ್ಮದಾಗಿದೆ. ಸ್ತ್ರೀಯರನ್ನು ಮಾತೃದೇವೋಭವ ಎಂದು ಕರೆಯುತ್ತೇವೆ. ಎಲ್ಲಿ ಹೆಣ್ಣನ್ನು ಗೌರವಿಸುತ್ತಾರೋ ಅಲ್ಲಿ ದೇವತೆಗಳು ನೆಲೆಸಿರುತ್ತಾರೆ ಎಂದರು.




ಮಹಿಳೆಗೆ ಪ್ರಾಮುಖ್ಯತೆ ಕೊಟ್ಟ ನಾಡಿನಲ್ಲಿ ಪ್ರಸ್ತುತ ಸಮಾಜದಲ್ಲಿ ಸಂತೋಷದಿಂದ ಬದುಕುತ್ತಿದ್ದಾರಾ ಎಂಬುದರ ಚರ್ಚೆ ಆಗಬೇಕಿದೆ. ಶಿಕ್ಷಣ, ಆಧುನಿಕತೆ, ಮೂಲಸೌಕರ್ಯಗಳು ಸುಲಭದಲ್ಲಿ ಎಟುಕುತ್ತಿದ್ದರೂ ಮಹಿಳೆಯರಿಗೆ ಕಟ್ಟುಪಾಡು ವಿಧಿಸಲಾಗುತ್ತಿದೆ ಎಂದು ಹೇಳಿದರು.

ಇವತ್ತಿಗೂ ಕೂಡ ಶೋಷಣೆ, ದೌರ್ಜನ್ಯ ಆಗುತ್ತಿದೆ. ಜೊತೆಗೆ ಸಿಗಬೇಕಾದ ಎಲ್ಲಾ ಸವಲತ್ತುಗಳು ಸಿಗುತ್ತಿಲ್ಲ. ಈ ನಿಟ್ಟಿನಲ್ಲಿ ಬದಲಾವಣೆ ಆಗಬೇಕು. ಸ್ತ್ರೀಯರು ಸ್ವಾಭಿಮಾನದಿಂದ ಬದುಕುವ ವಾತಾವರಣ ಕಲ್ಪಿಸಿಕೊಡಬೇಕು ಎಂದರು.

ಶ್ರೀ ಧರ್ಮಸ್ಥಳ ಮಂಜನಾಥೇಶ್ವರ ಆಯುರ್ವೇದ ಕಾಲೇಜಿನ ಡಾ. ಅಶ್ವಿನಿ ಧನಪಾಲ್ ಮಾತನಾಡಿ, ಮಹಿಳೆಯರು ಆರೋಗ್ಯದ ಬಗ್ಗೆ ಜಾಗರೂಕರಾಗಿಬೇಕು. ಒತ್ತಡದ ಜೀವನ ರೂಢಿಸಿಕೊಂಡರೆ ಅಪಾಯಕ್ಕೆ ಆಹ್ವಾನ ನೀಡಿದಂತಾಗುತ್ತದೆ. ನಿಯಮಿತ ವ್ಯಾಯಾಮ, ಆಹಾರ ಹಾಗೂ ನಿದ್ರೆ ಮಾಡಬೇಕು. ಆರೋಗ್ಯದಲ್ಲಿ ಏರುಪೇರಾದರೆ ತಕ್ಷಣವೇ ವೈದ್ಯರ ಭೇಟಿಯಾಗಬೇಕು ಎಂದು ಸಲಹೆ ನೀಡಿದರು.

ಬಾಲಮಂದಿರದ ಅಧೀಕ್ಷಕಿ ಆಶಾರಾಣಿ, ಧರ್ಮಮ್ಮ, ಭಾರತ್ ಸೇವಾದಳ ಜಿಲ್ಲಾ ಘಟಕದ ವಲಯ ಸಂಘಟಕಿ ವಿ.ಎಸ್. ರಾಣಿ, ಪೌರ ಕಾರ್ಮಿಕ ಮಹಿಳೆ ಲಕ್ಷ್ಮೀಲೋಕಿ ಅವರನ್ನು ಸನ್ಮಾನಿಸಲಾಯಿತು.

ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷೆ ಚೈತ್ರಾ ನಾಯಕರಹಳ್ಳಿ, ಕಾಂಚನಮಾಲ, ವಕೀಲೆ ಎಸ್.ಎಸ್. ಪಲ್ಲವಿ, ಭಾನುಮತಿ ಇತರರು ಇದ್ದರು.

# ಹಾಲುವಾಗಿಲು ಕಟ್ಟೆಗೆ ಬಿದ್ದು ಯುವಕ ಸಾವು, ಮತ್ತೊಬ್ಬ ಪಾರು




ಹಾಸನ: ನಗರ ಸಮೀಪದ ಹಾಲುವಾಗಿಲು ಕಟ್ಟೆ ವೀಕ್ಷಣೆಗೆ ತೆರಳಿದ್ದಾಗ ಕಾಲು ಜಾರಿ ಯುವಕ ನೀರು ಪಾಲಾಗಿದ್ದು ಮತ್ತೊಬ್ಬ ಕೂದಲೆಳೆ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ಭಾನುವಾರ ನಡೆದಿದೆ.

ಸಾಲಗಾಮೆ ಗ್ರಾಮದ ನಾಗೇಂದ್ರ (19) ಮೃತ ಯುವಕ. ನಗರದ ಪ್ರತಿಷ್ಠಿತ ಚಿನ್ನಾಭರಣ ಅಂಗಡಿಯಲ್ಲಿ ಕೆಲಸ ಮಾಡಿಕೊಂಡಿದ್ದ ಬೆಂಗಳೂರು ಮೂಲದ ಮಂಜುನಾಥ್ ಜೊತೆಗೆ ಮಧ್ಯಾಹ್ನ ಹಾಲುವಾಗಿಲು ಕಟ್ಟೆಗೆ ತೆರಳಿದ್ದ. ಫೋಟೊ ಕ್ಲಿಕ್ಕಿಸಿಕೊಳ್ಳಲು ಕಟ್ಟೆಯ ಮಧ್ಯಭಾಗಕ್ಕೆ ತೆರಳಿದ್ದಾಗ ಜೋರು ಮಳೆ ಶುರುವಾಗಿದೆ. ಇಬ್ಬರೂ ವಾಪಾಸ್ ಬರುವಾಗ ಕಾಲು ಜಾರಿ ಕೆಳಗೆ ಬಿದ್ದಿದ್ದಾರೆ. ಮಂಜುನಾಥ್‌ನು ಮೀನಿನ ಬಲೆ ಹಿಡಿದು ಉಪಾಯದಿಂದ ದಡಕ್ಕೆ ಬಂದಿದ್ದಾನೆ. ಆದರೆ ನೀರಿನ ಸುಳಿಗೆ ಸಿಲುಕಿದ ನಾಗೇಂದ್ರಗೆ ವಾಪಾಸ್ ಬರಲು ಸಾಧ್ಯವಾಗಿಲ್ಲ. ಸ್ಥಳೀಯರು ನೀಡಿದ ಮಾಹಿತಿ ಆಧರಿಸಿ ಗ್ರಾಮಾಂತರ ಠಾಣೆ ಪೊಲೀಸರು ಹಾಗೂ ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು. ಕತ್ತಲಾದ ಹಿನ್ನಲೆಯಲ್ಲಿ ಶವ ಶೋಧ ಕಾರ್ಯಾಚರಣೆಯನ್ನು ಸೋಮವಾರಕ್ಕೆ ಮುಂದೂಡಲಾಯಿತು.

ಕೆರೆಗೆ ಬಿದ್ದು ಸಾವು: ತಾಲ್ಲೂಕಿನ ದೊಡ್ಡಕೊಂಡಗೊಳ ಗ್ರಾಮದ ಕೆರೆಯಲ್ಲಿ ಕಾಲು ಜಾರಿ ಬಿದ್ದು ವೃದ್ಧ ಮೃತಪಟ್ಟಿರುವ ಘಟನೆ ನಡೆದಿದೆ. ಗ್ರಾಮದ ಕೃಷ್ಣೇಗೌಡ (75) ಮೃತರು. ಜಾನುವಾರುಗಳಿಗೆ ನೀರು ಕುಡಿಸಲೆಂದು ತೆರಳಿದ್ದಾಗ ಆಯತಪ್ಪಿ ಬಿದ್ದಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.




Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248